**<u>2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು, ವಿಜಯಪೂರ ಇವರ ನ್ಯಾಯಾಲಯ</u>**

ಸೆಷನ್ಸ್ ಕೇಸ್ ನಂ.**149/2022**
ಪಿ.ಡಬ್ಲೂ.03
ಸಿ.ಡಬ್ಲೂ.01

| | | |
|---|---|---|
| ಸಾಕ್ಷಿದಾರರ ಹೆಸರು | : | ಅಬ್ದುಲ್ ಅಜಿಜ್ ಮುಜವಾರ |
| ತಂದೆಯ ಹೆಸರು | : | ಅಬೀದ್ |
| ವಯಸ್ಸು | : | 31 ವರ್ಷ. |
| ಉದ್ಯೋಗ | : | ದ್ವಿ ಚಕ್ರ ವಾಹನ ಮೈಕಾನಿಕ್ |
| ವಾಸಸ್ಥಳ | : | ವಿಜಯಪುರ. |

ಇಂದು ದಿನಾಂಕ **23-09-2024** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ</u>

1) ನ್ಯಾಯಾಲಯದ ಮುಂದೆ ಇರುವ 2 ರಿಂದ 6 ನೇ ಆರೋಪಿತರ ಮತ್ತು ಗೈರು ಹಾಜರು ಉಳಿದಿರುವ 1 ನೇ ಆರೋಪಿ ಪರಿಚಯ ಇಲ್ಲ. ಚಾಸಾ-8 ವಸೀಮ್ ನನ್ನ ಸೋದರ ಅತ್ತೆ ಮಗ. ಚಾಸಾ-11 ನನಗೆ ಪರಿಚಯ ಇಲ್ಲ. ಚಾಸಾ-12 ನನ್ನ ದೊಡಪ್ಪ. ಚಾಸಾ-13 ನನ್ನ ದೊಡ್ಡಪ್ಪನ ಮಗ. ಚಾಸಾ-9, 10, 11 ನನಗೆ ಪರಿಚಯ ಇಲ್ಲ.

2) ನನ್ನ ಮನೆ ವಿಜಯಪುರದ ಜೆ.ಎಮ್ ರಸ್ತೆಯಲ್ಲಿ ಇರುತ್ತದೆ. ನಾನು ವಿಜಯಪುರ ಟಿಪ್ಪು ಸುಲ್ತಾನ್ ಚೌಕ ಹತ್ತಿರ ಅಬೀದ್ ಆಟೋ ವರ್ಕ್ಸ ಅಂತಾ ಗ್ಯಾರೆಜ್ ಇಟ್ಟುಕೊಂಡಿರುತ್ತೇನೆ. ನನ್ನ ಸೋದರ ಅತ್ತೆ ಈಗ ತೀರಿಕೊಂರುತ್ತಾರೆ. ಆಕೆಯ ಗಂಡ ಈಗ ಎಲ್ಲಿದ್ದಾನೆ ಗೊತ್ತಿಲ್ಲ. ಚಾಸಾ-8 ವಸೀಮ ನಮ್ಮ ದೊಡಡಪ್ಪನ ಮನೆಯಲ್ಲಿ ಇರುತ್ತಿದ್ದ. ಚಾಸಾ-8 ಮೆಕಾನಿಕ್ ಅಂತಾ ಲಿಂಗದಗುಡಿ ರಸ್ತೆಯಲ್ಲಿ ಕೆಲಸ ಮಾಡುತ್ತಾನೆ.

3) ಚಾಸಾ-11 ನನಗೆ ಆರೋಪಿತರು ಚಾಸಾ-8 ಇವರಿಗೆ ಹಲ್ಲೆ ಮಾಡಿದ ಸಂಗತಿ ಹೇಳಿಲ್ಲ. ನಾನು ಈ ಬಗ್ಗ ಯಾವುದೇ ದೂರು ನೀಡಿಲ್ಲ. ಪೊಲೀಸರಿಗೆ ಮರು ಹೇಳಿಕೆ ನೀಡಿಲ್ಲ.

4) ಸಾಕ್ಷಿಗೆ ದಿಃ 01.01.2021 ರ ದೂರಿನ ಮೇಲೆ ಇರುವ ಸಹಿಯನ್ನು ತೊರಿಸಲಾಗಿ ಗುರುತಿಸಿದ್ದರಿಂದ ಅದನ್ನು ನಿಪಿ-3, ಸಾಕ್ಷಿ ಸಹಿಯನ್ನು ನಿಪಿ-3(ಎ) ಅಂತಾ ಗುರುತಿಸಲಾಯಿತು.

5) ನಿಪಿ-3(ಎ) ಸಹಿಯನ್ನು ಈಗ್ಗೆ 3 ವರ್ಷಗಳ ಹಿಂದೆ ನಮ್ಮ ಗ್ಯಾರೆಜಿನಲ್ಲಿ ಮಾಡಿರುತ್ತೇನೆ, ಪೊಲೀಸರು ನನ್ನ ಸಹಿ ಪಡೆದುಕೊಂಡಿರುತ್ತಾರೆ. ಅದರಲ್ಲಿ ಬರೆದರುವ ಅಂಶ ನನಗೆ ಗೊತ್ತಿಲ್ಲ.

**(**ಈ ಹಂತದಲ್ಲಿ ಸಾಕ್ಷಿಯು ತಾನು ನೀಡಿದ ದೂರು ಮತ್ತು ಮರು ಹೇಳಿಕೆಯ ವಿರುದ್ಧವಾಗಿ ಸಾಕ್ಷ್ಯವನ್ನು ನೀಡುತ್ತಿರುವ ಕಾರಣ**,** ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ**,** ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ**.** ದಾಖಲೆಗಳನ್ನು ಪರಿಶೀಲಿಸಿ**,** ಅನುಮತಿ ನೀಡಲಾಯಿತು**.)**

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ**:**</u>

1) ಚಾಸಾ-8 ನಮ್ಮ ಮನೆಯಲ್ಲಿ ಬೆಳೆದಿದ್ದಾನೆ, ಆತ ನಮ್ಮ ದೊಡ್ಡಪ್ಪನ ಮನೆಯಲ್ಲಿ ಬೆಳೆದಿದ್ದಾನೆ ಅಂತಾ ಸುಳ್ಳು ಹೇಳುತಿದ್ದೇನೆ ಅಂದರೆ ಸರಿಯಲ್ಲ.

2) ದಿಃ 31.12.2020 ರಂದು ರಾತ್ರಿ 9.30 ಗಂಟೆ ಸುಮಾರಿಗೆ ನಾನು ಮನೆ ಹತ್ತಿರ ಇದ್ದಾಗೆ ನನ್ನ ಗೆಳೆಯ ಚಾಸಾ-11 ನನಗೆ ಕರೆ ಮಾಡಿ ಚಾಸಾ-8 ಇವರಿಗೆ 1ನೇ ಆರೋಪಿ ಸಮೀರ್ ಮತ್ತು ಆತನ ಗೆಳೆಯವರು ವಿಜಯಪುರ ಭಾಷ ನಗರದ ಹತ್ತಿರ ಯಾವುದೋ ಮಾರಕಾಸ್ತ್ರದಿಂದ ಹಲ್ಲೆ ಮಾಡಿದ್ದು, ತಾನು ವಸೀಮನನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇನೆ, ನೀವು ಬನ್ನಿ ಅಂತಾ ಹೇಳಿದ್ದ ಅಂದರೆ ಸರಿಯಲ್ಲ. ಆಗ ನಾನು, ಚಾಸಾ-12, 13 ವಿಜಯಪುರದ ಸರ್ಕಾರಿ ಆಸ್ಪತ್ರೆಗೆ ಹೋಗಿ ನೋಡಿದ್ದೇವು, ಅಲ್ಲಿ ಚಾಸಾ-8 ಇತನಿಗೆ ಮೈ ಕೈಯಿಗೆ ರಕ್ತ ಗಾಯವಾಗಿ, ಕೈಯಿಗೆ, ಕಾಲಿಗೆ ಬಾರಿ ಗಾಯಗಳು ಆಗಿ ಒದ್ದಾಡುತ್ತಿದ್ದ ಅಂದರೆ ಸರಿಯಲ್ಲ. ಆಗ ನಾನು, ಚಾಸಾ-9 ಮತ್ತು 10 ಸೇರಿ ಚಾಸಾ-8 ಇವರನ್ನು ವಿಚಾರಿಸಿಲಾಗಿ ಆತ ನಡೆದ ಘಟನೆಯನ್ನು ಹೇಳಿದ್ದ ಅಂದರೆ ಸರಿಯಲ್ಲ. ಈ ಬಗ್ಗೆ ನಾನು ದಿಃ 01.01.2021 ರಂದು ಈಗ ನನಗೆ ಓದಿ ಹೇಳಿದ ನಿಪಿ-3 ಪ್ರಕಾರ ದೂರನ್ನು ನೀಡಿದ್ದೆ ಅಂದರೆ ಸರಿಯಲ್ಲ.

3) ನಂತರ ದಿಃ 03.01.2021 ರಂದು ಆರೋಪಿತರ ಪೂರ್ತಿ ಹೆಸರು ಮತ್ತು ವಿಳಾಸ ಹೇಳಿ, 6ನೇ ಆರೋಪಿ ಪ್ರಚೋದನೆ ನೀಡಿದ್ದ ಅಂತಾ ಈಗ ನನಗೆ ಓದಿ ಹೇಳಿದಂತೆ "ನಾನು ದಿಃ 01.01.2021------------- ನಿಜ ಇರುತ್ತದೆ" ಅಂತಾ ಮರು ಹೇಳಿಕೆಯನ್ನು ನೀಡಿದ್ದೆ ಅಂದರೆ ಸರಿಯಲ್ಲ. ಸದರಿ ಮರು ಹೇಳಿಕೆಯನ್ನು ನಿಪಿ-4 ಅಂತಾ ಗುರುತಿಸಲಾಯಿತು.

4) ನಾನು ನಿಪಿ-3 ರಂತೆ ದೂರು ನೀಡಿದ್ದರೂ ಸಹ, ನಿಪಿ-4 ರಂತೆ ಮರು ಹೇಳಿಕೆ ನೀಡಿದ್ದರೂ ಸಹ ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಅನ್ನುವುದು ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರವಾಗಿ ಇರುವುದಿಲ್ಲ ಅಂತಾ ಹೇಳಿರುತ್ತಾರೆ.

ಮರುವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.
**23/09/2024**

**2** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು, ವಿಜಯಪೂರ ಇವರ ನ್ಯಾಯಾಲಯ

ಸೆಷನ್ಸ್ ಕೇಸ್ ನಂ.**149/2022**
ಪಿ.ಡಬ್ಲೂ.04
ಸಿ.ಡಬ್ಲೂ.04

ಸಾಕ್ಷಿದಾರರ ಹೆಸರು : ಅಸೀಫ್ ಅಲಮೇಲ್
ತಂದೆಯ ಹೆಸರು : ಉಸ್ಮಾನ್
ವಯಸ್ಸು : 32 ವರ್ಷ.
ಉದ್ಯೋಗ : ಸೆಂಟ್ರಿಂಗ್ ಕೆಲಸ.
ವಾಸಸ್ಥಳ : ಸಿಂದಗಿ.

ಇಂದು ದಿನಾಂಕ **23-09-2024** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

1) ಸಾಕ್ಷಿಗೆ ದಿಃ 08.02.2021 ರ ಆರೋಪಿತರು ಹೇಳಿ ತೊರಿಸುವ ಸ್ಕಾರ್ಪಿಯೋ ಕಾರ್, ಲಾಂಗ್ ಮತ್ತು ಚಾಕು ಜಪ್ತಿ ಪಂಚನಾಮೆ ಮೇಲೆ ಇರುವ ಸಹಿಯನ್ನು ತೊರಿಸಿ ಒಪ್ಪಿದ್ದರಿಂದ ಅದನ್ನು ನಿಪಿ-5, ಸಾಕ್ಷಿ ಸಹಿಯನ್ನು ನಿಪಿ-5(ಎ) ಅಂತಾ ಗುರುತಿಸಲಾಯಿತು. ಸಾಕ್ಷಿಗೆ ಎರಡು ಪೊಟೊಗಳನ್ನುತೊರಿಸಲಾಗಿ ತನ್ನ ಇರುವಿಕೆಯನ್ನ ಒಪ್ಪಿದ್ದರಿಂದ ಅದನ್ನು ನಿಪಿ-6 ಮತ್ತು 7 ಅಂತಾ ಗುರುತಿಸಲಾಯಿತು.

2) ನ್ಯಾಯಾಲಯದ ಮುಂದೆ ಇರುವ 2 ರಿಂದ 5 ನೇ ಆರೋಪಿತರು ಮತ್ತು ಗೈರು ಹಾಜರು ಉಳಿದಿರುವ 1 ನೇ ಆರೋಪಿ ಪರಿಚಯ ಇಲ್ಲ. ಆರೋಪಿತರು ನಮ್ಮನ್ನು ಕರೆದುಕೊಂಡು ಹೋಗಿ ಯಾವುದೇ ಕಾರ್, ಲಾಂಗ ಮತ್ತು ಚಾಕುಗಳನ್ನು ಹಾಜರುಪಡಿಸಿಲ್ಲ. ನಿಪಿ-5 ರಲ್ಲಿ ಏನು ಬರೆದಿದೆ ಅಂತಾ ನನಗೆ ಗೊತ್ತಿಲ್ಲ. ನಿಪಿ-6 ಮತ್ತು 7 ಪೊಟೊಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಅಂತಾ ನನಗೆ ಹೇಳಲು ಆಗುವುದಿಲ್ಲ. ಪೊಲೀಸರು ನನ್ನ ಹೇಳಿಕೆ ದಾಖಲು ಮಾಡಿಕೊಂಡಿಲ್ಲ. ಸಾಕ್ಷಿಗೆ ನ್ಯಾಯಾಲಯದ ಮುಂದೆ ಎರಡು ಲಾಂಗ್, ಎರಡು ಚಾಕು, ಪೊಟೊದಲ್ಲಿರುವ ಸ್ಕಾರ್ಪಿಯೋ ವಾಹನವನ್ನು ತೊರಿಸಲಾಗಿ ಗುರುತಿಸುವಲ್ಲಿ ವಿಫಲರಾಗಿರುತ್ತಾರೆ. ಪೊಲೀಸರು ನನ್ನ ಮತ್ತು ಚಾಸಾ-5 ಇವರ ಸಮಕ್ಷಮ ಯಾವುದೇ ಪಂಚನಾಮೆ ಮಾಡಿ ವಾಹನ, ಲಾಂಗ್, ಚಾಕು ಇವುಗಳನ್ನು ವಶಕ್ಕೆ ಪಡೆದುಕೊಂಡಿಲ್ಲ.

3) ವಿಜಯಪುರದ ಬಸ್ ನಿಲ್ದಾಣದಲ್ಲಿದ್ದಾಗ ಪೊಲೀಸರು ನಿಪಿ-5 ಕ್ಕೆ ನನ್ನ ಸಹಿ ಪಡೆದುಕೊಂಡಿರುತ್ತಾರೆ.

**(**ಈ ಹಂತದಲ್ಲಿ ಸಾಕ್ಷಿಯು ಪಂಚನಾಮೆಗೆ ವಿರುದ್ಧವಾಗಿ ಸಾಕ್ಷ್ಯವನ್ನು ನೀಡುತ್ತಿರುವ ಕಾರಣ**,** ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ**,** ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ**.** ದಾಖಲೆಗಳನ್ನು ಪರಿಶೀಲಿಸಿ**,** ಅನುಮತಿ ನೀಡಲಾಯಿತು**.)**

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ**:**</u>

1) ದಿಃ 08.02.2021 ರಂದು ನನ್ನನ್ನು ಮತ್ತು ಚಾಸಾ-5 ಇವರನ್ನು ಪೊಲೀಸರು ಠಾಣೆಗೆ ಕರೆಯಿಸಿದ್ದರು, ಅಲ್ಲಿ 1 ರಿಂದ 5 ನೇ ಆರೋಪಿತರು ಹಾಜರು ಇದ್ದರು ಅಂದರೆ ಸರಿಯಲ್ಲ. ಪೊಲೀಸರು ನಮ್ಮ ಸಮಕ್ಷಮ 1 ರಿಂದ 5 ನೇ ಆರೋಪಿತರನ್ನು ವಿಚಾರಿಸಿದಾಗ ಘಟನೆ ಕಾಲಲಕ್ಕೆ ಉಪಯೋಗಿಸಿದ ಕಾರ್, ಲಾಂಗ, ಚಾಕು ಇವುಗಳನ್ನು ವಿಜಯಪುರದ ಸೆಂಟ್ರಲ್ ಜೈಲ್ ಹತ್ತಿರ ಒಂದು ಕಂಟಿಯಲ್ಲಿ ಒಗೆದಿದ್ದೇವೆ ತಾವು ಬಂದರೆ ತೊರಿಸಿ ಹಾಜರುಪಡಿಸುತ್ತೇವೆ ಅಂತಾ ಹೇಳಿಕೆ ನೀಡಿದ್ದರು ಅಂದರೆ ಸರಿಯಲ್ಲ. ಅದಕ್ಕಾಗಿ ನಾನು ಪಂಚನಾಗಲು ಒಪ್ಪಿಕೊಂಡಿದ್ದೆ ಅಂದರೆ ಸರಿಯಲ್ಲ. ನಂತರ 1 ರಿಂದ 5 ನೇ ಆರೋಪಿರು ನನ್ನನ್ನು, ಚಾಸಾ-5 ಮತ್ತು ಪೊಲೀಸರನ್ನು ಧರ್ಗಾ ಜೈಲ ಹತ್ತಿರ ಆರೋಪಿತರು ಕರೆದುಕೊಂಡು ಹೋಗಿದ್ದರು, ಅಲ್ಲಿ ಕೇಂದ್ರ ಕಾರಗೃಹಕೆ ಹೋಗುವ ಮುಖ್ಯ ರಸ್ತೆಗೆ 50 ಮೀಟರ ದೂರದಲ್ಲಿ ಒಂದು ಸ್ಕಾರ್ಪಿಯೋ ಕಾರ ನಿಂತಿತ್ತು, ಅದನ್ನು ಘಟನೆ ಕಾಲಕ್ಕೆ ನಾನೇ ನಡೆಸುತ್ತಿದ್ದೆ ಅಂತಾ 4 ನೇ ಆರೋಪಿ ಹೇಳಿದ್ದ ಅಂದರೆ ಸರಿಯಲ್ಲ. ಅದರ ಮುಂದಿನ, ಹಿಂದಿನ, ಸೈಡ ಗ್ಲಾಸಗಳು ಒಡೆದಿದ್ದವು ಅಂದರೆ ಸರಿಯಲ್ಲ. 1 ಮತ್ತು 3 ನೇ ಆರೋಪಿತರು ತಲಾ ಒಂದು ಲಾಂಗ್, 2 ಮತ್ತು 5 ನೇ ಆರೋಪಿತರು ತಲಾ ಒಂದು ಚಾಕುಗಳನ್ನು ಹಾಜರುಪಡಿಸಿದ್ದರು, ಅವುಗಳನ್ನು ಪೊಲೀಸರು ನನ್ನ ಮತ್ತು ಚಾಸಾ-5 ರವರ ಸಮಕ್ಷಮ ದಿಃ 08.02.2021 ರಂದು ಸಾಯಂಕಾಲ 4.30 ರಿಂದ 5.30 ಸಮಯದಲ್ಲಿ ನಿಪಿ-5 ರಂತೆ ಮಹಜರ ಮಾಡಿ ವಶಕ್ಕೆ ಪಡೆದುಕೊಂಡಿದ್ದರು ಅಂದರೆ ಸರಿಯಲ್ಲ. ಆ ಕಾಲಕ್ಕೆ ನಿಪಿ-6 ಮತ್ತು 7 ರಂತೆ ಪೊಟೊಗಳನ್ನು ತೆಗೆದಿದ್ದರು ಅಂದರೆ ಸರಿಯಲ್ಲ. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ಎರಡು ಲಾಂಗ ಮತ್ತು ಚಾಕುಗಳನ್ನು ತೊರಿಸಲಾಗಿ ಗುರುತಿಸವಲ್ಲಿ ವಿಫಲರಾಗಿರುತ್ತಾರೆ. ಈ ಬಗ್ಗೆ ನಾನು ಅದೇ ದಿನ ಪೊಲೀಸರ ಮುಂದೆ ಈಗ ನನಗೆ ಓದಿ ಹೇಳಿದಂತೆ

"ನಾನು ಮೇಲ್ಕಾಣಿಸಿದ-------------- ಸಹಿ ಮಾಡಿರುತ್ತೇನೆ" ಅಂತಾ ಹೇಳಿಕೆ ನೀಡಿದ್ದೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-8 ಅಂತಾ ಗುರುತಿಸಲಾಯಿತು.

2) ನನ್ನ ಸಮಕ್ಷಮ ನಿಪಿ-5 ರಂತೆ ಮಹಜರ ಮಾಡಿ, ನ್ಯಾಯಾಲಯದ ಮುಂದೆ ಇರುವ ಎರಡು ಲಾಂಗ, ಚಾಕು ಮತ್ತು ವಾಹನವನ್ನು ವಶಕ್ಕೆ ಪಡೆದುಕೊಂಡಿದ್ದರೂ ಸಹ ನಿಪಿ-8 ರಂತೆ ಹೇಳಿಕೆ ನೀಡಿದ್ದರೂ ಸಹ ನಾನು ಆರೋಪಿತರಿಗೆ ಹೆದರಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಅನ್ನುವುದು ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರವಾಗಿ ಇರುವುದಿಲ್ಲ ಅಂತಾ ಹೇಳಿರುತ್ತಾರೆ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.

**23/09/2024**